**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ (13-03-1969).**

(ओम शान्ति, बापदादा. अव्यक्त मुरली 13-03-1969)

*ಪ್ರೇಮ ಮತ್ತು ಶಕ್ತಿಯ ಗುಣಗಳ ಸಮಾನತೆ* (प्रेम और शक्ति के गणों की समानता)

ಆತ್ಮಾಭಿಮಾನಿಯಾಗಿ ನೆನಪಿನ ಯಾತ್ರೆಯಲ್ಲಿ ಕುಳಿತಿರುವಿರಾ? ನೆನಪಿನ ಯಾತ್ರೆಯಲ್ಲಿಯೂ ಮುಖ್ಯವಾಗಿ ಯಾವ ಗುಣದಲ್ಲಿ ಸ್ಥಿತರಾಗಿರುವಿರಿ? ನೆನಪಿನ ಯಾತ್ರೆಯಲ್ಲಿ ಇರುತ್ತಲೂ ಮುಖ್ಯವಾಗಿ ಯಾವ ಗುಣ ಸ್ವರೂಪರಾಗಿದ್ದೀರಿ? (ಎಲ್ಲರೂ ತಮ್ಮ ವಿಚಾರವನ್ನು ಹೇಳಿದರು.) ಈ ಸಮಯದಲ್ಲಂತೂ ಎಲ್ಲರೂ ವಿಶೇಷ ಪ್ರೇಮ ಸ್ವರೂಪ ಸ್ಥಿತಿಯಲ್ಲಿರುವಿರಿ. ಆದರೆ ಪ್ರೇಮದ ಜೊತೆ-ಜೊತೆಗೆ ವರ್ತಮಾನ ಸಮಯದ ಪರಿಸ್ಥಿತಿಗಳಿಗೆ ಅನುಗುಣವಾಗಿ ಎಷ್ಟು ಪ್ರೇಮಸ್ವರೂಪರೋ ಅಷ್ಟೇ ಶಕ್ತಿಸ್ವರೂಪರೂ ಆಗಬೇಕು. ದೇವಿಯರ ಚಿತ್ರಗಳನ್ನು ನೋಡಿರುವಿರಿ--ದೇವಿಯರ ಚಿತ್ರದಲ್ಲಿ ಮುಖ್ಯವಾಗಿ ಯಾವ ವಿಶೇಷತೆ ಇರುತ್ತದೆ. ತಮ್ಮ ಚಿತ್ರಗಳನ್ನು ಎಂದಾದರೂ ಗಮನವಿಟ್ಟು ನೋಡಿರುವಿರಾ? ದೇವಿಯರ ಚಿತ್ರವನ್ನು ತಯಾರು ಮಾಡುವಾಗ ಕಾಳಿಯ ಹೊರತು ಉಳಿದೆಲ್ಲಾ ದೇವಿಯರ ಚಿತ್ರಗಳಲ್ಲಿ ನಯನಗಳು ಪ್ರೀತಿಯಿಂದ ಒದ್ದೆಯಾದಂತೆ ತೋರಿಸುತ್ತಾರೆ. ಕಣ್ಣುಗಳನ್ನು ಪ್ರೇಮದಲ್ಲಿ ಮುಳುಗಿದಂತೆ ತೋರಿಸುವುದರ ಜೊತೆಗೆ ಮುಖಚರ್ಯೆಯಲ್ಲಿ ಶಕ್ತಿಯ ಸಂಸ್ಕಾರಗಳು ಕಂಡುಬರುತ್ತವೆ. ಕಣ್ಣುಗಳಲ್ಲಿ ಪ್ರೇಮ, ದಯೆ, ಶೀತಲತೆ ಕಂಡು ಬರುತ್ತವೆ. ಮಾತೃತ್ವದ ಪ್ರೇಮದ ಸಂಸ್ಕಾರ ಕಣ್ಣುಗಳಿಂದ ಕಂಡುಬರುತ್ತದೆ. ಅವರ ವಾಹನ ಅಥವಾ ಅಸ್ತ್ರ-ಶಸ್ತ್ರಗಳು ಅವರ ಶಕ್ತಿರೂಪವನ್ನು ಪ್ರಕಟ ಮಾಡುತ್ತವೆ. ಇದೇ ರೀತಿ ಶಕ್ತಿಯರಾದ ನಿಮ್ಮಲ್ಲಿ ಈ ಎರಡೂ ಗುಣಗಳು ಸಮಾನವಾಗಿರಬೇಕು. ಎಷ್ಟು ಶಕ್ತಿಸ್ವರೂಪರೋ ಅಷ್ಟೇ ಪ್ರೇಮಸ್ವರೂಪರು. ಇಲ್ಲಿಯವರೆಗೆ ಎರಡು ರೂಪಗಳಂತೂ ಕಾಣಿಸುತ್ತಿಲ್ಲ. ಒಮ್ಮೆ ಪ್ರೇಮದ ಅಲೆಗಳಲ್ಲಿ ಮತ್ತೊಮ್ಮೆ ಶಕ್ತಿ ರೂಪದಲ್ಲಿ ಸ್ಥಿತರಾಗಿರುವಿರಿ. ಆದರೆ ಎರಡೂ ಜೊತೆಗಿದ್ದು ಸಮಾನವಾಗಿರಬೇಕು. ಇದು ಶಕ್ತಿಸ್ಥಿತಿಯ ಅಂತಿಮ ಸಂಪೂರ್ಣತೆಯ ಗುರುತಾಗಿದೆ.

ಈಗ ಬಾಪ್ ದಾದರವರಿಗೆ ತಮ್ಮ ಮಕ್ಕಳ ಮಸ್ತಕದಲ್ಲಿ ಏನು ಕಾಣಿಸುತ್ತಿದೆ? ನಿಮ್ಮ ಮಸ್ತಕವನ್ನು ನೋಡಿಕೊಂಡಿರುವಿರಾ, ಏನಿದೆ? ಪ್ರಾರಬ್ಧವನ್ನು ನೋಡಿಕೊಂಡಿದ್ದೀರಾ ಅಥವಾ ವರ್ತಮಾನ ಸೌಭಾಗ್ಯದ ನಕ್ಷತ್ರ ಹೊಳೆಯುತ್ತಿರುವುದನ್ನು ನೋಡಿಕೊಂಡಿದ್ದೀರಾ ಅಥವಾ ಇನ್ಯಾವುದನ್ನಾದರೂ ನೋಡುತ್ತಿರುವಿರಾ? (ಪ್ರತಿಯೊಬ್ಬರು ತಮ್ಮ-ತಮ್ಮ ವಿಚಾರವನ್ನು ತಿಳಿಸಿದರು) ಮೂರು ಸಂಬಂಧಗಳಿಂದ ಮೂರು ವಿಷಯಗಳು ಕಾಣಿಸುತ್ತಿವೆ. ಆದ್ದರಿಂದ ನಿಮಗೆ ತ್ರಿಶೂಲ ಕಾಣಿಕೆಯಾಗಿ ಕಳಿಸಲಾಗಿತ್ತು. ಮೂರೂ ನಕ್ಷತ್ರಗಳು (ಅದೃಷ್ಟ ನಕ್ಷತ್ರ) ಕಾಣಿಸುತ್ತಿವೆ. 1. ಭವಿಷ್ಯದ ನಕ್ಷತ್ರ, 2. ವರ್ತಮಾನ ಸೌಭಾಗ್ಯ ನಕ್ಷತ್ರ ಮತ್ತು 3. ಯಾವುದಾದರೆ ಪರಂಧಾಮದಲ್ಲಿ ನಿಮ್ಮ ಆತ್ಮನ ಸಂಪೂರ್ಣ ಸ್ಥಿತಿಯಾಗಬೇಕಾಗಿದೆಯೋ, ಆ ಸಂಪೂರ್ಣತೆಯ ನಕ್ಷತ್ರ, ಮೂರೂ ನಕ್ಷತ್ರಗಳು ಕಾಣಿಸುತ್ತಿವೆ. ಈ ಮೂರು ನಕ್ಷತ್ರಗಳನ್ನು ನೋಡಿಕೊಳ್ಳುತ್ತಾ ಇರಬೇಕು ಆಗಾಗ ನಕ್ಷತ್ರಗಳ ಮಧ್ಯದಲ್ಲಿ ಮೋಡಗಳು ಬರುತ್ತವೆ. ಆಗಾಗ ನಕ್ಷತ್ರಗಳು ಸ್ಥಾನವನ್ನು ಬದಲಾಯಿಸುತ್ತವೆ, ಆಗಾಗ ಕೆಳಗೆ ಬೀಳುತ್ತವೆ, ಇಲ್ಲಿಯೂ ಅಷ್ಟೆ ಆಗಾಗ ಸ್ಥಾನವನ್ನು ಬದಲಾಯಿಸುತ್ತಿದ್ದಾರೆ, ಆಗಾಗ ಕೆಳಗೆ ಬೀಳುತ್ತಿದ್ದಾರೆ, ಆಗಾಗ ನೋಡಿದಾಗ ಬಹಳ ಮೇಲೆ, ಮಧ್ಯದಲ್ಲಿ ಮತ್ತು ಬಹಳ ಕೆಳಗಡೆ ಕೂಡ ಕಾಣಿಸುತ್ತಿದ್ದಾರೆ. ಸ್ಥಾನ ಕೂಡ ಬದಲಾಗಬಾರದು. ಒಂದು ವೇಳೆ ಬದಲಾಗಬೇಕಾಗಿ ಬಂದರೆ ಮುಂದಕ್ಕೆ ಹೋಗಿರಿ, ಆದರೆ ಕೆಳಗೆ ಬರಬಾರದು. ಅವಿನಾಶಿ ಸಂಪೂರ್ಣ ಸ್ಥಿತಿಯಲ್ಲಿ ಸದಾ ಮೇಲಕ್ಕೆ ಏರುತ್ತಾ ಇರಬೇಕು. ಈಗ ಇಂತಹ ನಕ್ಷತ್ರವಾಗಬೇಕು. ಇಲ್ಲಿ ಬೀಳುವ ವಿಷಯವೇ ಇಲ್ಲ. ಎಲ್ಲಾ ಒಳ್ಳೆಯ ಪುರುಷಾರ್ಥಿಗಳೇ ಕುಳಿತುಕೊಂಡಿರುವಿರಿ, ಈಗ ಕೇವಲ ಸ್ಥಾನವನ್ನು ಬದಲಾಯಿಸುವ ವಿಷಯವನ್ನು ಅಳಿಸಬೇಕಾಗಿದೆ.

ಕುಮಾರಿಯರ ಫಲಿತಾಂಶ ಏನಿದೆ? ತಾವು ತಮ್ಮ ಫಲಿತಾಂಶವನ್ನು ತಿಳಿದಿದ್ದೀರಾ? ವಿಶೇಷ ಯಾವ ಮಾತಿನ ಬಗ್ಗೆ ಉನ್ನತಿಯಿದೆ ಎಂದು ತಿಳಿದಿದ್ದೀರಿ? (ಪ್ರತಿಯೊಬ್ಬರೂ ತಮ್ಮದನ್ನು ಹೇಳಿದರು) ನೆನಪಿನ ಯಾತ್ರೆಯಲ್ಲಿ ಕೊರತೆಯಿದೆ. ಆದರಿಂದ ಅಷ್ಟೊಂದು ಅನುಭವವಾಗುವುದಿಲ್ಲ. ಅಮೃತವೇಳೆಯಲ್ಲಿ ನೆನಪಿನ ಅನುಭವ ಅಷ್ಟು ಆಗದಿದ್ದಾಗ ಸಾಕಾರದಲ್ಲಿ ಹೇಗೆ ಹೊರಗಡೆ ಶುದ್ಧ ಗಾಳಿಯಲ್ಲಿ ಒಂದು ಉದ್ದೇಶವನ್ನು ಕೊಟ್ಟು ಪರಿಕ್ರಮಣ  ಮಾಡಿಸುತ್ತಿದ್ದರೋ ಹಾಗೆ ನಿಮಿತ್ತರಾದ ಶಿಕ್ಷಕಿಯರು ಕುಮಾರಿಯರಿಗೆ ಅರ್ಧ ಗಂಟೆ ಏಕಾಂತದಲ್ಲಿ ಪರಿಕ್ರಮಣೆ ಮಾಡಿಸಲಿ. ಆರಂಭದಲ್ಲಿ ನೀವು ಬೇರೆ ಬೇರೆಯಾಗಿ ಸಾಗರದ ದಡದಲ್ಲಿ, ಇನ್ನೂ ಕೆಲವರು ಬೇರೆ-ಬೇರೆ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತಿದ್ದ ರೀತಿಯಲ್ಲೇ ಅಭ್ಯಾಸ ಮಾಡಿಸಿ. ಇಲ್ಲಂತೂ ದೊಡ್ಡ ದೊಡ್ಡ ಮಂಟಪಗಳಿವೆ(ಛತ್ತು/ಆಶ್ರಯ ತಾಣ). ನಂತರ ಸಾಯಂಕಾಲ 7:00 ರಿಂದ 7:30 ರವರೆಗೆ ಈ ಸಮಯ ವಿಶೇಷವಾಗಿ ಒಳ್ಳೆಯದಾಗಿರುತ್ತದೆ. ಅಮೃತವೇಳೆ ಹೇಗೆ ಸತೋಗುಣಿಯಾಗಿರುವುದೋ ಈ ಸಾಯಂಕಾಲದ ಸಮಯವೂ ಹಾಗೆಯೇ ಸತೋಗುಣಿಯಾಗಿದೆ. ಇದೇ ಸಮಯದಲ್ಲಿ ಪರಿಕ್ರಮಣೆಗೂ(ಸುತ್ತಾಡುವುದು)  ಹೋಗಬಹುದು ಮತ್ತು ಈ ಸಮಯದಲ್ಲಿಯೇ ಸಂಘಟನೆಯಲ್ಲಿ ಯೋಗ ಮಾಡಿಸಿ ಹಾಗೂ ಮಧ್ಯೆ ಮಧ್ಯೆ ಅವ್ಯಕ್ತರೂಪದಲ್ಲಿ ಯಾರದ್ದೇ  ಬುದ್ಧಿಯೋಗ ಅತ್ತಿತ್ತ ಹೋದರೆ ಮತ್ತೆ ಗಮನಕೊಟ್ಟು ಸರಿಪಡಿಸಿಕೊಳ್ಳುವಂತೆ ಕಾಮೆಂಟರಿ ಕೊಡಿ. ಯೋಗದ ಸಬ್ಜೆಕ್ಟ್ ನಲ್ಲಿ ಬಹಳ ಕೊರತೆ ಇದೆ. ಭಾಷಣ ಮಾಡುವುದು, ಪ್ರದರ್ಶನಿಗಳಲ್ಲಿ ತಿಳಿಸುವುದನ್ನು ಈಗ ಶಾಲೆಗೆ ಹೋಗುವ ಕುಮಾರಿಯರಿಗೆ ಒಂದು ವಾರ ತರಬೇತಿ ಕೊಟ್ಟರೆ ಬಹಳ ಚೆನ್ನಾಗಿ ಮಾಡುತ್ತಾರೆ. ಆದರೆ ಇದಂತೂ ಜೀವನದಲ್ಲಿ ಅತೀಂದ್ರಿಯ ಸುಖದ ಅನುಭವ ಮಾಡುವುದಾಗಿದೆ. ಆ ಸಮಯದಲ್ಲಿ ಬಾಪ್ ದಾದಾರವರ ನಿಮಂತ್ರಣದಂತೆ ಹೋಗುತ್ತಿದ್ದೇವೆ ಎಂದು ತಿಳಿದುಕೊಳ್ಳಿ. ಹೇಗೆ ಬಾಪ್ ದಾದಾ ಪರಿಕ್ರಮಣೆ ಮಾಡಲು ಬರುತ್ತಾರೆಯೋ  ಹಾಗೆಯೇ ಬುದ್ಧಿಯೋಗದ ಬಲದಿಂದ ನೀವೂ ಪರಿಕ್ರಮಣೆ ಮಾಡಬಹುದು. ಯಾವಾಗ ನೆನಪಿನ ಯಾತ್ರೆಯ ಅನುಭವ ಮಾಡುವಿರೋ ಆಗ ಅವ್ಯಕ್ತ ಸ್ಥಿತಿಯ ಪ್ರಭಾವ ತಮ್ಮ ಕಣ್ಣುಗಳಿಂದ, ಚಲನೆಯಿಂದ ಪ್ರತ್ಯಕ್ಷವಾಗಿ ಕಾಣುವುದು. ಆರಂಭದಲ್ಲಿ ತಾವೇ ಸ್ವತಃ ಮಾಲೆಯನ್ನು ಮಾಡಿದ ಹಾಗೆಯೇ ನಂತರ ಅವರಿಂದ ಮಾಲೆ ಮಾಡಿಸೋಣ.

ಈ ತಂಡದ ಉಮಂಗ-ಉತ್ಸಾಹ ಚೆನ್ನಾಗಿದೆ. ಮತ್ತೊಂದು ಮಾತನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಿ- ಪರಸ್ಪರರ ಸಂಸ್ಕಾರಗಳನ್ನು ಅರಿತು, ಸ್ನೇಹದಲ್ಲಿ ಪರಸ್ಪರರು ಸಂಪೂರ್ಣವಾಗಿ ಹೊಂದಾಣಿಕೆಯಿಂದ ಒಟ್ಟಿಗೆ  ಇರಬೇಕು. ಯಾರೊಂದಿಗಾದರೂ ವಿಶೇಷ ಸ್ನೇಹವಿದ್ದರೆ ಅವರೊಂದಿಗೆ ಎಷ್ಟು ಹೊಂದಾಣಿಕೆಯಾಗುತ್ತದೆಯೋ ಅದೇ ರೀತಿ ಎಲ್ಲರೂ ಪರಸ್ಪರರೊಂದಿಗೆ ಹೊಂದಾಣಿಕೆಯಿಂದ ಇರಬೇಕು. ಈ ರೀತಿ ಕುಮಾರಿಯರು ಮಾಡಿ ತೋರಿಸಿದಾಗ ಬೇರೆ ಕುಮಾರಿಯರೂ ಸೇವೆಗೆ ನಿಮಿತ್ತರಾಗುವರು ಮತ್ತು ನಿಮಿತ್ತರಾದವರಿಗೆ ಅದರ ಫಲವೂ ದೊರೆಯುವುದು. ಅನೇಕ ಕುಮಾರಿಯರನ್ನು ಉಲ್ಲಾಸ-ಉತ್ಸಾಹ ಮತ್ತು ಉನ್ನತಿಯಲ್ಲಿ ತರಲು ತಾವೆಲ್ಲರೂ ಶೋಕೇಸ್ (ಉದಾಹರಣೆ) ಆಗಿದ್ದೀರಿ. ಸಾಕಾರ--ನಿರಾಕಾರರಿಬ್ಬರೂ ಸೇರಿಕೊಂಡು ಎಷ್ಟೊಂದು ಉತ್ಸಾಹದಿಂದ ಈ ಕಾರ್ಯಕ್ರಮವನ್ನು ಆಯೋಜಿಸಿದ್ದರೋ, ಅಷ್ಟೇ ಅದರ ಪರಿಣಾಮವನ್ನು ತೋರಿಸಿ. ಆಗ ಅನೇಕ ಕುಮಾರಿಯರ ಉನ್ನತಿಗೆ ನಿಮಿತ್ತರಾಗುವಿರಿ ಹಾಗು ತಮ್ಮ ಸರಿ-ಸಮಾನರಾಗಿರುವವರನ್ನೂ ಬೀಳುವುದರಿಂದ ಉಳಿಸಬಲ್ಲಿರಿ.  ಕುಮಾರಿಯರ ಜೊತೆಗೆ ಬಾಪದಾದಾರವರ ಸ್ನೇಹ ಸಾಕಷ್ಟಿದೆ.  ಏಕೆಂದರೆ ಬಾಪ್ ದಾದಾ ಪರಮಪವಿತ್ರರಾಗಿದ್ದಾರೆ ಮತ್ತು ಕುಮಾರಿಯರೂ ಪವಿತ್ರರಾಗಿದ್ದಾರೆ. ಆದ್ದರಿಂದ ಪವಿತ್ರತೆ, ಪವಿತ್ರತೆಯನ್ನು ಆಕರ್ಷಿಸುತ್ತದೆ. ವರ್ತಮಾನ ಸಮಯದಲ್ಲಿ ತಮ್ಮ ಗುಣವನ್ನು ಇನ್ನೊಬ್ಬರಲ್ಲಿ ತುಂಬುವ ವಿಶೇಷತೆ ಮುಖ್ಯವಾಗಿರಬೇಕು, ಇದು ಪ್ರತಿಯೊಬ್ಬ ಮಹಾರಥಿಯ ಕರ್ತವ್ಯವಾಗಿದೆ. ಜ್ಞಾನ ದಾನವನ್ನು ಹೇಗೆ ಮಾಡಲಾಗುತ್ತದೆಯೋ ಹಾಗೆಯೇ ಗುಣಗಳ ದಾನವನ್ನೂ ಮಾಡಬೇಕು. ಜ್ಞಾನರತ್ನಗಳ ದಾನವನ್ನು ಮಾಡುವುದರಿಂದ ಹೇಗೆ ಮಹಾರಥಿಯೆಂದು ಕರೆಯಿಸಿಕೊಳ್ಳುತ್ತಿರುವಿರೋ ಹಾಗೆಯೇ ಗುಣಗಳ ದಾನವೂ ಬಹಳ ದೊಡ್ಡ ದಾನವಾಗಿದೆ. ಜ್ಞಾನ ದಾನ ಸಹಜವಾಗಿದೆ. ಆದರೆ ಗುಣಗಳ ದಾನದಲ್ಲಿ ಸ್ವಲ್ಪ ಶ್ರಮವಿದೆ. ಗುಣಗಳ ದಾನದಲ್ಲಿ ಎಲ್ಲಾ

ಮಹಾರಥಿಗಳಲ್ಲಿ ಮೊದಲಿಗರಾರು? ಜನಕ್ (ಜಾನಕಿ ದಾದಿ). ಈ ಗುಣ ಅವರಲ್ಲಿ ವಿಶೇಷವಾಗಿದೆ. ಒಬ್ಬೊಬ್ಬರಿಂದ ಒಂದೊಂದು ಗುಣವನ್ನು ಧಾರಣೆ ಮಾಡುವುದು.

**ಅಬು ಸಂಗ್ರಹಾಲಯದ ತಯಾರಿಯ ಬಗ್ಗೆ ಬಾಪ್ ದಾದಾ ಹೇಳಿದರು.**

ದೂರದೇಶಿ ಮತ್ತು ವಿಶಾಲ ಬುದ್ಧಿಯವರಾಗಿ ಸಂಗ್ರಹಾಲಯವನ್ನು ತಯಾರು ಮಾಡಿ. ಮೊದಲೇ ಭವಿಷ್ಯದ ಬಗ್ಗೆ ವಿಚಾರ ಮಾಡಿ, ಸಮಯವನ್ನು ಸಫಲ ಮಾಡಿಕೊಳ್ಳುವಂತಹ ಗುಣ ಧಾರಣೆ ಮಾಡಿಕೊಳ್ಳಿ ಮತ್ತು ಸಮಯಕ್ಕೆ ಸರಿಯಾಗಿ ತಯಾರು ಮಾಡಿ. ಬೇಗನೆ ಆಗಬೇಕು ಮತ್ತು ಸಂಪೂರ್ಣವಾಗಬೇಕು ಆಗ ಅದ್ಭುತವೆನಿಸಿಕೊಳ್ಳುವುದು. ಒಂದು ವೇಳೆ ಕೊರತೆ ಇದ್ದರೆ ಅದರ ಕಡೆಗೆ ಎಲ್ಲರ ದೃಷ್ಟಿ ಹೋಗುವುದು. ಈ ರೀತಿ ಕೊರತೆ ಇಲ್ಲದಿರಲಿ. ಎಲ್ಲರೂ ಅದ್ಭುತವಾಗಿದೆ ಎನ್ನಬೇಕು. ಇಡೀ ದೈವೀ ಪರಿವಾರ ತಮ್ಮ ಮುಖವನ್ನು ಸಂಗ್ರಹಾಲಯದ ದರ್ಪಣದಲ್ಲಿ ನೋಡುವರು. ಒಳ್ಳೆಯದು.

**ಅವ್ಯಕ್ತ ಮುರಳಿ 13-03-1969.**

**ಪ್ರೇಮ ಮತ್ತು ಶಕ್ತಿಯ ಗುಣಗಳ ಸಮಾನತೆ.**

ಆತ್ಮಿಕ ಸ್ಥಿತಿಯಲ್ಲಿ ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರೇಮ ಮತ್ತು ಶಕ್ತಿ ಎರಡು ಗುಣಗಳನ್ನು ಸಮಾನವಾಗಿ ಧಾರಣೆ ಮಾಡಿರುವ ಶಕ್ತಿ ಸ್ಥಿತಿಯ ಅಂತಿಮ ಸಂಪೂರ್ಣ ಸ್ವರೂಪ.

2. ನಾನು ಭವಿಷ್ಯದ ನಕ್ಷತ್ರ (ಅದೃಷ್ಟ ನಕ್ಷತ್ರ).

3. ನಾನು ವರ್ತಮಾನದ ಸೌಭಾಗ್ಯ ನಕ್ಷತ್ರ.

4. ನಾನು ಪರಂಧಾಮದಲ್ಲಿ ಸಂಪೂರ್ಣ ಸ್ಥಿತಿಯ ನಕ್ಷತ್ರ.

5. ನಾನು ಅವಿನಾಶಿ ಸಂಪೂರ್ಣ ಸ್ಥಿತಿಯಲ್ಲಿ ಸದಾ ಮೇಲೆ ಹಾರುತ್ತಾ ಇದ್ದೇನೆ.

6. ನಾನು ಆತ್ಮಿಕ ಸಹೋದರರ ಸಂಸ್ಕಾರಗಳನ್ನು ತಿಳಿದುಕೊಂಡು, ಎಲ್ಲರೊಂದಿಗೆ ಹೊಂದಿಕೊಂಡಿರುವ ವಿಶೇಷ ಸ್ನೇಹಿ.

7. ನಾನು ಪರಮ ಪವಿತ್ರ ಸ್ವರೂಪ.

8. ನಾನು ಜ್ಞಾನ ರತ್ನಗಳು ಮತ್ತು ಗುಣಗಳನ್ನು ದಾನ ಮಾಡುವ ಮಹಾರಥಿ.

**ಹೆಚ್ಚಿನ ಮಾಹಿತಿಗಾಗಿ.**

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).

2. ಅತೀಂದ್ರಿಯ ಸುಖ : ಅವ್ಯಕ್ತ ಮುರಳಿ (25-01-1974 - ಆನಂದವನ್ನು ಅನುಭವ ಮಾಡುವ ವಿಧಿ.)

3. ಪವಿತ್ರತೆ: ಅವ್ಯಕ್ತ ಮುರಳಿ (25-06-1977 - ಪವಿತ್ರತೆಯ ಸಂಪೂರ್ಣ ಸ್ಥಿತಿ.

• ಸತ್ಯತೆ & ಸ್ವಚ್ಛತೆ: 28-09-1969 - ಪೂರ್ಣ ಕೋರ್ಸ್ ನ ಸಾರ - ಮಾತು ಮತ್ತು ಕೃತಿಯನ್ನು ಒಂದೇ ಮಾಡಿ.

17-10-1987 - ಬ್ರಾಹ್ಮಣ ಜೀವನದ ಅಲಂಕರಣೆ ಪವಿತ್ರತೆ.

14-01-1979 - ಬ್ರಾಹ್ಮಣ ಜೀವನದ ವಿಶೇಷ ಆಧಾರ ಪವಿತ್ರತೆ.

16-03-1992 - ಹೋಲಿ ಆಚರಿಸುವುದು ಎಂದರೆ ದೃಢಸಂಕಲ್ಪ ಎಂಬ ಅಗ್ನಿಯಲ್ಲಿ ಬಲಹೀನತೆಗಳನ್ನು ಸುಟ್ಟು ಹಾಕಬೇಕು ಮತ್ತು ಮಿಲನದ ಮೋಜನ್ನು ಆಚರಿಸುವುದು.

22-03-1986 - ಸುಖ, ಶಾಂತಿ ಮತ್ತು ಸಂತೋಷಕ್ಕೆ ಆಧಾರ ಪವಿತ್ರತೆ.

25-03-1986 - ಹೋಲಿಯ ರಹಸ್ಯ.

24-03-1982 ಬ್ರಾಹ್ಮಣ ಜೀವನದ ವಿಶೇಷತೆ-ಪವಿತ್ರತೆ.

13-02-1999 - ಶಿವ ಅವತರಣೆಯ ಜೊತೆ-ಜೊತೆಗೆ ತಾವು ಮಕ್ಕಳು ಸಂಕಲ್ಪದ ಖಜಾನೆಯನ್ನು ಉಳಿತಾಯ ಮಾಡುವವರಾಗಿ.)

4. ಪ್ರತ್ಯಕ್ಷತೆ : ಅವ್ಯಕ್ತ ಮುರಳಿ

( 25-10-2002 - ಬ್ರಾಹ್ಮಣ ಜೀವನಕ್ಕೆ ಆಧಾರ ಪವಿತ್ರತೆಯ ವಾಸ್ತವಿಕತೆ.

15-12-2003 - ಪ್ರತ್ಯಕ್ಷತೆಯ ಸಲುವಾಗಿ ಸಾಧಾರಣತೆಯನ್ನು ಅಲೌಕಿಕತೆಯಲ್ಲಿ ಪರಿವರ್ತನೆ ಮಾಡಿ ದರ್ಶನದ ಮೂರ್ತಿಯಾಗಿರಿ.).